ಮಾಡಲಾಗಿದೆ. ಪ್ರತ್ಯೇಕ ರೈತರ ಮಂಟ್ಪದಲ್ಲಿ ಸರಾಸರಿ ಇಳುವರಿಯ ಆಧಾರಭೂತ ಅಂಕಿಅಂಶಗಳನ್ನು ಪಡೆಯಲು ಹೆಚ್ಚಿನ ಜನಶಕ್ತಿ ಮತ್ತು ಖರ್ಚು ಆಗುತ್ತದೆ. ಇದರಿಂದ ರೈತರು ಹೆಚ್ಚಿನ ವಿಮಾ ಕಂತನ್ನು ಕೊಡಬೇಕಾಗುತ್ತದೆ. ಆದುದರಿಂದ ವಿಮಾ ಕಂತನ್ನು ಕೆಳಗಿನ ಮಟ್ಟದಲ್ಲಿಡಲು ಬೆಳೆ ವಿಮಾ ಯೋಜನೆಯನ್ನು ತಾಲ್ಲೂಕುಮಟ್ಟದಲ್ಲಿ, ಸಮೂಹ ವಿಮೆಯನ್ನಾಗಿ ಜಾರಿಗೊಳಿಸಲಾಗಿದೆ. ದೀರ್ಘಾವಧಿಯಲ್ಲಿ ಸಾಕಷ್ಟು ಸರಾಸರಿ ಇಳುವರಿಯ ಅಂಕಿ ಅಂಶಗಳನ್ನು ಒದಗಿಸಿದರೆ, ಈಯೋಜನೆಯನ್ನು ಹೋಬಳಿ, ಹಳ್ಳಿಯ ಅಥವಾ ವೈಯಕ್ತಿಕ ಮಟ್ಟದಲ್ಲಿ ಕೊಡಲು ಸಾಧ್ಯವಾಗಬಹುದು.

ಈ ಯೋಜನೆ ರೈತರಿಗೆ ಲಾಭದಾಯಕವಾಗಿದೆ. ೧೯೮೫ರ ಮುಂಗಾರು ಹಂಗಾಮಿನಲ್ಲಿ ೩.೦೩ ಕೋಟಿ ರೂಪಾಯಿಂಗಳನ್ನು ನಷ್ಟ ಪರಿಹಾರದ ರೂಪದಲ್ಲಿ ವಿಮೆ ಮಾಡಿಸಿರುವ ರೈತರುಗಳಿಗೆ ನೀಡಲಾಗಿದೆ.

6. ಡಾ॥ ಅಂಬೇಡ್ಕರ ಬಾಲಕಿಯರ ವಸತಿ ವಿದ್ಯಾಶಾಲೆಯಲ್ಲಿ ಇಂಗ್ಲೀಷ್ ಮಾಧ್ಯಮವನ್ನು ಎಲ್ಲಾ ತರಗತಿಗಳಿಗೂ ಅನ್ವಯಿಸುವುದು

ಶ್ರೀ ಬಿ ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ ಸರ್ಕಾರಿ ಹುಕುಂ ನಂ ಇ.ಡಿ. ೨೮೮ ಎಂ. ಹೆಚ್. ಎಸ್. ೮೫, ತಾರೀಖು. ೧೫-೫-೮೬ರ ಪ್ರಕಾರ, ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ವಸತಿವಿದ್ಯಾಶಾಲೆಯ ನಿಯಮಾವಳಿಗಳ ಮಾದರಿಯಲ್ಲಿ ಕನ್ನಡದ ಜೊತೆಗೆ ಇಂಗ್ಲೀಷ್ ಮಾಧ್ಯಮವನ್ನು ಬಳಸಲು ಡಾ॥ ಬಿ. ಆರ್. ಅಂಬೇಡ್ಕರ್ ಪರಿಶಿಷ್ಟಜಾತಿ ವರ್ಗ ಪ್ರತಿಷ್ಠಾನ್ವಿತ ಬಾಲಕಿಯರ ವಸತಿ ವಿದ್ಯಾಶಾಲೆಯನ್ನು ಮಂಜೂರ್ಮಾಡಲಾಗಿದೆ. ಕಿತ್ತೂರು ರಾಣಿ ಚನ್ನಮ್ಮ ಸ್ಕೂಲು ಮಾದರಿಯಲ್ಲಿ ಡಾ. ಬಿ ಆರ್ ಅಂಬೇಡ್ಕರ್ ಬಾಲಕಿಯರ ವಸತಿ ವಿದ್ಯಾಶಾಲೆಗೂ, ಇಂಗ್ಲಿಷ್ ಮಾಧ್ಯಮವನ್ನು ಎಲ್ಲಾ ತರಗತಿಗೂ ಅನ್ವಯಿಸುವಂತೆ ಸರ್ಕಾರದವರು ೧೯೮೭-೮೮ ರಿಂದ ಜಾರಿಗೆ ಕೊಡಲು ಹುಕುಂ ಮಾಡುವರೇ?

ಶ್ರೀ ಡಿ ಮಂಜುನಾಥ್ (ಶಿಕ್ಷಣ ಸಚಿವರು).—ಸ್ವಾಮಿ, ಈಗ ಇಂಗ್ಲೀಷ್ ಮಾಧ್ಯಮವನ್ನು ಜಾರಿಗೆ ತರುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ ಇದಕ್ಕೆ ಕ್ಯಾಬಿನೆಟ್, ಸಮಿತಿಯನ್ನು, ನೇಮಕ ಮಾಡಿದೆ. ಇಷ್ಟರಲ್ಲೇ ಸಮಿತಿ ಸೇರುತ್ತದೆ. ಸೇರಿ ಒಂದು ನಿರ್ಧಾರ ತೆಗೆದುಕೊಳ್ಳುತ್ತೇವೆ,

ಅಧ್ಯಕ್ಷರು —ಶ್ರೀ ಶಿವಲಿಂಗೇಗೌಡ, ಆಬ್ಸೆಂಟ್

ಶ್ರೀ ರಾಮಕೃಷ್ಣ ಆಬ್ಸೆಂಟ್

7 ೧೯೮೬-೮೭ನೇ ಸಾಲಿನಲ್ಲಿ ರಾಜ್ಯದಲ್ಲಿ ಬರಗಾಲಕ್ಕೆ ತುತ್ತಾದ ಗ್ರಾಮಗಳಿಗೆ ಸರ್ಕಾರದಿಂದ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ೧೯೮೬-೮೭ನೇ ಸಾಲಿನಲ್ಲಿ ಬರಗಾಲಕ್ಕೆ ತುತ್ತಾದ ಗ್ರಾಮಗಳೆಷ್ಟು ಮತ್ತು ಈವರೆಗೆ ಬರಗಾಲ ಕಾಮಗಾರಿಗಾಗಿ ಖರ್ಚು ಮಾಡಿರುವ ಹಣವೆಷ್ಟು ಎಂಬ ವಿವರದ ಬಗ್ಗೆ ಮತ್ತು ಕೂಲಿ ಸಿಗದೆ, ಅಲೆಯುತ್ತಿರುವ ಕೂಲಿ ಕಾರ್ಮಿಕರಿಗೆ ಸರ್ಕಾರ ಕೂಲಿಗಾಗಿ ಏನು ವ್ಯವಸ್ಥೆ ಮಾಡಿದೆ ಎಂಬ ಸಾರ್ವಜನಿಕ ಮಹತ್ವವಾದ ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎ ಲಕ್ಷ್ಮೀಸಾಗರ್ (ಕಂದಾಯ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಕಳೆದ ನಾಲ್ಕು ವರ್ಷಗಳಿಂದ ಇದ್ದ ತೀವ್ರ ಬರಗಾಲ ಪರಿಸ್ಥಿತಿಯು ೧೯೮೬-೮೭ರ ಬೇಸಿಗೆಯ ತಿಂಗಳುಗಳಾದ ಏಪ್ರಿಲ್ ಮೇ ಮತ್ತು ಜೂನ್ ತಿಂಗಳವರೆಗೆ ಮುಂದುವರಿದುಕೊಂಡು ಬಂದಿತ್ತು ೧೯೮೭ರ ಜೂನ್, ಜುಲೈ ತಿಂಗಳಿಂದ ಆರಂಭವಾಗುವ ಮುಂಗಾರು ಮಳೆಯಿಂದ, ಕೃಷಿ ವರ್ಷದಲ್ಲಿ ರಾಜ್ಯದ ಬಹುತೇಕ ಕಡೆ ಒಳ್ಳೆಯ ಮಳೆಯಾಗಿದ್ದು ಕೆಲವೇ ಭಾಗಗಳಲ್ಲಿ ಅಲ್ಲಲ್ಲಿ ಸಾಕಷ್ಟು ಮಳೆಯಾಗದೇ ಅಭಾವ ಪರಿಸ್ಥಿತಿಯೂ ಉದ್ಭವಿಸಿತ್ತು.

ಅಭಾವ ಪರಿಸ್ಥಿತಿಯ ವಿವರ (೧೯೮೬–೮೭ನೇ ಸಾಲಿನಲ್ಲಿ ಡಿಸೆಂಬರ್ ಅಂತ್ಯದವರೆಗೆ)

ಅಭಾವಕ್ಕೊಳಗಾದ ಜಿಲ್ಲೆಗಳ ಸಂಖ್ಯೆ	ತಾಲ್ಲೂಕುಗಳ ಸಂಖ್ಯೆ	ಗ್ರಾಮಗಳ ಸಂಖ್ಯೆ	ಜಾನುವಾರು ಸಂಖ್ಯೆ	ಸಾರ್ವಜನಿಕರ ಸಂಖ್ಯೆ	ಪ್ರದೇಶ ಹೆಕ್ಟೇರು ಗಳಲ್ಲಿ	ಶೇಕಡವಾರು ಬಿತ್ತನೆಯಾದ ಪ್ರದೇಶ
೧೩	೯೪	೬೮೪೩	೩೩.೧೨	೮೫.೨೫	೧೫,೩೨, ೭೨೫	೩೬.೩೭

ಈ ಅಭಾವ ಪೀಡಿತ ಪ್ರದೇಶಗಳಲ್ಲಿ ಪೀಡಿತರಾದ ಜನ ಮತ್ತು ಜಾನುವಾರುಗಳಿಗೆ ಪರಿಹಾರ ಒದಗಿಸುವ ದಿಸೆಯಲ್ಲಿ ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

೧. ಕೆಲಸ ಅರಸಿ ಬರುವ ಜನತೆಗೆ ಉದ್ಯೋಗ ಒದಗಿಸುವ ಯೋಜನಾ ಕ್ರಮಗಳಾದ ಎನ್.ಆರ್.ಇ. ಪಿ.ಆರ್.ಎಲ್.ಇ.ಜಿ.ಪಿ.ಡಿ.ಪಿ.ಎ.ಪಿ.ಮುಂತಾದ ಕಾರ್ಯಕ್ರಮಗಳಡಿಯಲ್ಲಿ ಹೆಚ್ಚಿನ ಉದ್ಯೋಗಾವಕಾಶವನ್ನು ಅಭಾವಪೀಡಿತ ಪ್ರದೇಶಗಳಲ್ಲಿ ಕಲ್ಪಿಸಿ ಜನರಿಗೆ ಉದ್ಯೋಗದ ಒದಗಿಸಿಕೊಡುವ ವ್ಯವಸ್ಥೆ ಮಾಡಲಾಗಿದೆ. ಇದಲ್ಲದೆ, ಅತೀ ತೀವ್ರವಾಗಿ ಅಭಾವಕ್ಕೀಡಾಗಿರುವ ಹಳ್ಳಿಗಳಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಸಲುವಾಗಿ ೧, ೨೦,೦೦೦ ರೂ, ಗಳನ್ನು ವಿಶೇಷವಾಗಿ ಬಿಡುಗಡೆ ಮಾಡಲಾಗಿದೆ

೨. ಹಾಗೂ ಭಾಧಿತ ಜನ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿಗೆ ಹಾಗೂ ಜಾನುವಾರುಗಳಿಗೆ ಮೇವಿನ ಸಾಗಾಣಿಕೆ ಮತ್ತು ಸರಬರಾಜಿಗಾಗಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಹಣವನ್ನು ಒದಗಿಸಿಕೊಡಲಾಗಿದೆ.

೩. ಕುಡಿಯುವ ನೀರಿನ ಅಭಾವ ಇರುವ ಗ್ರಾಮ ಮತ್ತು ನಗರ ಪ್ರದೇಶಗಳಲ್ಲಿಯೂ ಕೂಡ ಕೊಳವೆ ಬಾವಿಗಳನ್ನು ತೋಡಲು ಹಾಗೂ ಇನ್ನಿತರ ಗ್ರಾಮಗಳಿಗೂ ಕೂಡ ಹಣವನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಬಿಡುಗಡೆ ಮಾಡಲಾಗಿದೆ.

೪. ಈ ವರ್ಷ ಮುಂಗಾರು ಮಳೆಗಳಲ್ಲಿ ಮಲೆನಾಡು ಜಿಲ್ಲೆಗಳಾದ ಉತ್ತರ ಕನ್ನಡ ಶಿವಮೊಗ್ಗ, ಬೆಳಗಾವಿ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಕಾಲಕ್ಕೆ ಸರಿಯಾಗಿ ಮಳೆಯಾಗದೇ ರೈತರು ಬಿತ್ತಿದ ಭತ್ತದ ಬೀಜ ಹಾಗೂ ಬಾದಿದ್ದ ಪೈರು ನಾಶವಾಗಿದ್ದು. ಅಲ್ಲಿನ ರೈತರು ಅದರಲ್ಲೂ ವಿಶೇಷವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಪರಿಹಾರ ಒದಗಿಸಿಕೊಡುವ ದಿಸೆಯಲ್ಲಿ ಅಂದರೆ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲೆಲ್ಲ ಎಣ್ಣೆಕಾಳು ಹಾಗೂ ಬೇಳೆಕಾಳುಗಳ ಮರು ಬಿತ್ತನೆಗೆ ಅವಕಾಶ ಮಾಡಿ ಕೊಡುವ ಸಲುವಾಗಿ ಬೀಜ ಮತ್ತು ಗೊಬ್ಬರಗಳನ್ನೊಳಗೊಂಡ ಮಿನಿ ಕಿಟ್ಸ್‌ಗಳನ್ನು ಉಚಿತವಾಗಿ ಹಂಚಲಾಯಿತು ಇದಕ್ಕಾಗಿ ೨೫.೦೦ ಲಕ್ಷ ರೂ ಗಳನ್ನು ಬಿಡುಗಡೆ ಮಾಡಲಾಯಿತು.

ಬರಪರಿಹಾರ ಕಾರ್ಯಕ್ರಮಗಳಿಗೆ ಈ ಕೆಳಕಂಡಂತೆ ಹಣ ಬಿಡುಗಡೆ ಮಾಡಲಾಗಿದೆ :

(ಲಕ್ಷ ರೂಪಾಯಿಗಳಲ್ಲಿ)

ಎನ್. ಆರ್. ಇ. ಪಿ.	ಆರ್. ಎಲ್. ಇ. ಜಿ. ಪಿ.	ಡಿ. ಪಿ. ಎ. ಪಿ.	ವಿಶೇ ಸಾಗಾಣಿಕೆ.	
ಬರ ಪರಿಹಾರ	ರೆಗ್ಯುಲರ್		ಕುಡಿಯುವ ನೀರು	ಮೇವು
೧,೨೦,೦೨೦	೨೭೩೧.೨೧೪	೨೨೯೩.೨೬೬	೧೧೨೨.೧೦೯	೨೨.೨೭	೯೦.೮೦

ಗೋಶಾಲೆಗಳು	ಕೃಷಿ ಮಿನಿ ಕಿಟ್ಸ್
೨೫.೭೭	೨೫.೦೦

ಮುಖ್ಯ ಮಂತ್ರಿಯವರ ಪರಿಹಾರ ನಿಧಿಯಿಂದ (೨೮-೨-೮೭ ರಲ್ಲಿ ಇದ್ದಂತೆ)

(ಲಕ್ಷ ರೂಪಾಯಿಗಳಲ್ಲಿ)

ಕುಡಿಯುವ ನೀರಿನ ಸಾಗಾಣಿ	ಮೇವು ಪೂರೈಕೆ	ಕುಡಿಯುವ ನೀರಿನ ಪೂರೈಕೆ ಗ್ರಾಮಾಂತರ	ಪಟ್ಟಣ	ಉದ್ಯೋಗ ಸೃಜನೆ
೭೮.೫೧	೯೪.೦೦	೨೦೨.೭೧	೧೬.೦೦	೬೫.೦೦

ಮೇಲೆ ಹೇಳಿದಂತೆ ಬರಗಾಲ ಪೀಡಿತ ಪ್ರದೇಶಗಳಲ್ಲಿ ಜನತೆಗೆ ಸಮಯಕ್ಕೆ ತಕ್ಕ ಪರಿಹಾರ ಒದಗಿಸುವ ದಿಸೆಯಲ್ಲಿ ಸರಕಾರವು ಬದ್ಧವಾಗಿದೆ ಎಂದು ತಿಳಿಸಲು ನಾನು ಇಚ್ಛಿಸುತ್ತೇನೆ.

ಅಧ್ಯಕ್ಷರು.— ಶ್ರೀ ಎಂ. ಶಿವಣ್ಣ (ಆಬ್ಸೆಂಟ್)

ಶ್ರೀ ಕೆ. ಶಿವಲಿಂಗೇಗೌಡರು (ಆಬ್ಸೆಂಟ್)

ಈಗ ಗಮನ ಸೆಳೆಯುವ ಸೂಚನೆ.

ಗಮನ ಸೆಳೆಯುವ ಸೂಚನೆ

2) ಪುತ್ತೂರು ತಾಲ್ಲೂಕು ವಿಟ್ಲಪ್ಪಿ ಗ್ರಾಮದ ನಾರಾಯಣ ಪೂಜಾರಿಯವರ ಕೊಲೆಯಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ.

ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).— ಮಾನ್ಯ ಅಧ್ಯಕ್ಷರೇ, ಪುತ್ತೂರು ತಾಲ್ಲೂಕಿನ ವಿಟ್ಲಪ್ಪಿ ಗ್ರಾಮದ ನಾರಾಯಣ ಪೂಜಾರಿಯವರ ಕೊಲೆಯಿಂದ ಉದ್ಭವಿಸಿದ ಪರಿಸ್ಥಿತಿಯ ವಿಚಾರದ ಬಗ್ಗೆ ಮಾನ್ಯ ಗೃಹ ಮಂತ್ರಿಯವರ ಗಮನವನ್ನು ಸೆಳೆಯಲು ಇಚ್ಛಿಸುತ್ತೇನೆ.

ಶ್ರೀ ಬಿ. ರಾಚಯ್ಯ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ವಿನಯಕುಮಾರ್ ಸೊರಕೆ ಅವರು ಮಂಡಿಸಿರುವ ಗಮನಸೆಳೆಯುವ ಸೂಚನೆ ಬಗ್ಗೆ ಈ ಕೆಳಕಂಡ ಹೇಳಿಕೆಯನ್ನು ತಮ್ಮ ಅನುಮತಿಯನ್ನು ಪಡೆದು ನೀಡಲು ಇಚ್ಛಿಸುತ್ತೇನೆ.

ಕ್ಷಯರೋಗದಿಂದ ನರಳುತ್ತಿದ್ದ ತಮ್ಮ ಸೋದರಳಿಯ ಶ್ರೀ ನಾರಾಯಣ ಪೂಜಾರಿಯವರು ದಿನಾಂಕ ೫-೩-೮೭ರ ಸಾಯಂಕಾಲದಿಂದ ತಪ್ಪಿಸಿಕೊಂಡಿದ್ದು, ಅವರ ಶವವು ಗೇರುಬೀಜದ ಮರದಲ್ಲಿ ನೇತಾಡುತ್ತಿತ್ತೆಂದು ದಿನಾಂಕ ೬-೩-೮೭ ರಂದು ಮಿರ್ಡೆಹಳ್ಳಿಯ ಶ್ರೀ ಚಿನ್ನಪ್ಪ ಪೂಜಾರಿಯವರು ದೂರನ್ನು ಇತ್ತಿದ್ದರು. ಈ ದೂರು ಬಂದ ತಕ್ಷಣ ಪುತ್ತೂರಿನ ಠಾಣಾಧಿಕಾರಿಯವರು ಕ್ರಮಸಂಖ್ಯೆ ೩-೮೭ ರಲ್ಲಿ ಪ್ರಕರಣವನ್ನು ದಾಖಲು ಮಾಡಿಕೊಂಡರು. ಈ ಶವ ಪರೀಕ್ಷೆಯನ್ನು ಅಲ್ಲಿನ ವೈದ್ಯಾಧಿಕಾರಿಯವರು ನಡೆಸಿ, ಇದು ನೇಣು ಹಾಕಿಕೊಂಡು ಉಸಿರುಗಟ್ಟಿದ ಕಾರಣ ಸತ್ತಿದ್ದಾರೆಂದು ವರದಿ ಕೊಟ್ಟಿರುತ್ತಾರೆ. ಅಪರಿಚಿತ ವ್ಯಕ್ತಿಗಳು ಅವರನ್ನು ಕೊಲೆ ಮಾಡಿರುವುದಾಗಿ ನಾರಾಯಣ ಪೂಜಾರಿಯವರ ಹೆಂಡತಿಯವರು ದೂರಿತ್ತಿದ್ದಾರೆ. ಅದರಿಂದ ಮತ್ತೆ ಈ ಪ್ರಕರಣವು ತನಿಖೆಯಲ್ಲಿದೆ.

ಶ್ರೀ ವಿನಯಕುಮಾರ್ ಸೊರಕೆ.— ಮಾನ್ಯ ಅಧ್ಯಕ್ಷರೇ, ಶ್ರೀ ನಾರಾಯಣಪೂಜಾರಿಯವರ ಶವ ಗೇರುಬೀಜ ಮರದಲ್ಲಿ ನೇತಾಡುತ್ತಿತ್ತು ಮತ್ತು ಅವರು ಕ್ಷಯ ರೋಗದಿಂದ ನರಳುತ್ತಿದ್ದರೆಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ ಆದರೆ ನಾರಾಯಣ ಪೂಜಾರಿಯವರ ಶವ ಗೇರು ಬೀಜಮರದಲ್ಲಿ ನೇತಾಡುತ್ತಿರುವಂತಹ ಸಂದರ್ಭದಲ್ಲಿ ಅದು ನೆಲಕ್ಕೆ ಮುಟ್ಟುತ್ತಿತ್ತು. ನಂತರ ಅವರ ಶರೀರದಲ್ಲಿ ಮತ್ತು ಪೋಸ್ಟ್‌ಮಾರ್ಟಮ್‌ನಲ್ಲಿ ಗಾಯಗಳಾಗಿದ್ದವು ಆಗಿದ್ದರೂ ಕೂಡ ಪೋಸ್ಟ್-ಮಾರ್ಟಂ ರಿಪೋರ್ಟಿನಲ್ಲಿ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಹೇಳಿದ್ದಾರೆ. ಮಾರುದಿವಸ ಪೋಲೀಸಿನವರು ಶ್ರೀ ನಾರಾಯಣ ಪೂಜಾರಿಯವರ ಪತ್ನಿಯವರಿಂದ ಯಾವುದೇ ರೀತಿಯಾದಂಥ ಸ್ಟೇಟ್‌ಮೆಂಟ್ ಆಗಲಿ ತೆಗೆದುಕೊಂಡಿಲ್ಲ ಅವರಿಗೆ ಯಾವುದೇ ರೀತಿಯಾದಂಥ ತಿಳುವಳಿಕೆಯನ್ನು ಸಹ ಕೊಡದೆ ಪೋಸ್ಟ್-ಮಾರ್ಟಂ ಮಾಡಿದ್ದಾರೆ. ಈ ಸಂದರ್ಭದಲ್ಲಿ ಶ್ರೀ ನಾರಾಯಣ ಪೂಜಾರಿಯವರ ಪತ್ನಿ